ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 5th September 1973 Bhadrapada 14, 1895 S. E.

The House met in the Assembly Chamber, Vidhana Soudha, at one of the Clock.

MADAM SPEAKER : (*Smt. K. S. Nagarathnamma*) in the Chair

STARRED QUESTIONS

(to which oral answers were given)

MADAM SPEAKER :—Sri Puttadasa is authorised to put question No. 38

OPENING OF PROVIDENT FUND ACCOUNTS BY COLLEGES

38. SRI H. PUTTADASA (Sathnur) :—On behalf of SRI S. KARIAPPA (Kanakapura)—Will the Minister for Education be pleased to state .—

(*a*) the names of colleges which have not opened the provident fund accounts in individual names of their employees ;

(*b*) whether the Government is aware of the difficulties of such college which have not so far opened such accounts ;

(*c*) the solutions the Government have thought of in respect of those colleges which have no financial resources for opening such accounts since they have utilised the P. F. Amount for other purposes of the Colleges ?

SRI A. R. BADARINARAYANA (MINISTER FOR EDUCATION)—

(*a*) *vide* Statement appended

(*b*) no such difficulties have been brought to the notice of the Government.

(*c*) utilisation of P. F. accumulations for other purposes constitute's an irregulartily and calls for suitable action.

STATEMENT

1 Teresian College, Mysore
2 MDTDB College, Mysore
3 J. S. S. College, Chamarajanagar
4 J. S. S. College, Nanjangud
5 Municipal First Grade College, Hunsur
6 Municipal First Grade College, K. R. Nagar
7 J. S. S. College for Women, Mysore
8 M. E. S. College, Mulbagal
9 Vidyodaya Law College, Tumkur
10 First Grade College of Arts, Science and Commerce, Sira
11 Gomateswara Mahavidyalaya College, Sravanbelagula
12 Hoysaleshwara College, Arsikere
13 S. T. J. College for Women, Chikmagalur
14 Sarswathi Law College, Chitradurga
15 S. J. V. P. Art, Science and Commerce College, Harihar
16 Intitute of Social Service, Mangalore
17 Cauvery College, Gonikappal
18 Dayananda College of Science, Bangalore
19 M. V. P. Arts, Science and Home Science College, Hubli
20 S. J. M. V. S. Arts, College for Women, Hubli
21 R. T. E's. Arts and Science College, Ranebennur
22 Shankar's Arts College, Navalgund
23 Smt. Allam Sumangalamma Memorial College for Women, Bellary.

24 Gangavathi Bhagyam na Rural College, Huvinahadhalli
25 The Anjuman Arts and Science College, Bhatkal
26 Divekar College, of Commerce, Karwar
27 S.E.S. Arts Collage, Baad
28 HKES's SS Margal College of Arts and Science, Shahabad
29 H. K. E. S. Arts and Science College, Shorapur
30 M. S. I. Institute of Science, Gulbarga
31 S V. E's Channabasaveshwar Arts College, Bhalki
32 Karnatak Commerce College, Bidar

ಶ್ರೀ ಹೆಚ್. ಪುಟ್ಟದಾಸ್ :—ಭವಿಷ್ಯ ನಿಧಿ ಮೊಬಲಗನ್ನು ಇತರ ಉದ್ದೇಶಕ್ಕೆ ಉಪಯೋಗ ಮಾಡಿದ್ದರೆ ಕ್ರಮ ತೆಗೆದುಕೊಳ್ಳುತ್ತೀರಾ ? ಸಂಪನ್ಮೂಲವಿಲ್ಲದೆ ಭವಿಷ್ಯನಿಧಿ ಉಪಯೋಗಿಸಿಕೊಳ್ಳಬಹುದೇ ?

*ಶ್ರೀ ಎ. ಆರ್ ಬದರಿನಾರಾಯಣ್ :— ಹಾಗೆ ಸಂಪನ್ಮೂಲವಿಲ್ಲದಿದ್ದರೆ ಕಾಲೇಜನ್ನು ಮುಚ್ಚಬೇಕಾಗುತ್ತದೆ. ಭವಿಷ್ಯನಿಧಿ ಕಾಲೇಜಿನವರು ಇತರ ಉಪಯೋಗಕ್ಕೆ ವಿನಿಯೋಗಮಾಡಿದರೆ ಕ್ರಮ ತೆಗೆದುಕೊಳ್ಳಬೇಕಾಗುವುದು.

ಶ್ರೀ ಎಂ. ಮಲ್ಲಪ್ಪ :—ಭವಿಷ್ಯನಿಧಿ ಲೆಕ್ಕವನ್ನು ಪ್ರಾರಂಭಿಸಬೇಕಾದ್ದು ಕಡ್ಡಾಯವಲ್ಲವೇ ? ಹಾಗೆ ಮಾಡಲೇಬೇಕೆಂದು ನಿರ್ದೇಶ ಹೋಗಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್ :—ಹೌದು

ಶ್ರೀ ಎಂ. ಮಲ್ಲಪ್ಪ :— ಹಾಗೆ ಮಾಡದಿದ್ದರೆ ಕ್ರಮ ತೆಗೆದುಕೊಳ್ಳಲು ಅಧಿಕಾರವಿದೆಯಲ್ಲವೇ ?

ಶ್ರೀ ಎ. ಆರ್ ಬದರಿನಾರಾಯಣ್ :—ಆ ಹಣವನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು ಎಂದು ಕಾನೂನೇ ಇದೆ.

ಶ್ರೀ ಎಂ. ಮಲ್ಲಪ್ಪ :—ಹಾಗೆ ಕಾನೂನು ಪ್ರಕಾರ ಮಾಡದಿದ್ದರೆ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎ. ಆರ್ ಬದರಿನಾರಾಯಣ್ :—ತೆಗೆದುಕೊಳ್ಳುತ್ತೇವೆ.

---

*Asterisks indicate that remarks or speeches have not been revised by the member concerned

ಶ್ರೀ ಎಂ ಬಿ. ರಾಮಸ್ವಾಮಿ :—ಈ ಸಂಬಂಧದಲ್ಲಿ ಎಷ್ಟು ಕಾಲೇಜುಗಳ ಬಗ್ಗೆ ದೂರು ಬಂದಿದೆ? ಬಂದಿದ್ದರೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.?

ಶ್ರೀ ಎ. ಆರ್. ಬದರಿನಾರಾಯಣ್ :— ದೂರು ಬಂದಿಲ್ಲ. ಅವರು ವಸೂಲು ಮಾಡುತ್ತಿದ್ದಾರೆ. ರೂಲ್ಸ್ ಪ್ರಕಾರ ನಡೆದುಕೊಳ್ಳುತ್ತಿದ್ದಾರೆ ಎಂದು ನಂಬಿದ್ದೇವೆ. ಹಾಗೆ ಮಾಡದಿದ್ದರೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ

DISTRIBUTION OF FOREST LAND IN NORTH KANARA DISTRICT.

58. SMT. RADHA BHATT (Ankola).—

Will the Minister for Revenue be pleased to state :—

(*a*) the number of acres of land which has been transferred from the Forest Department to Revenue Department in North Kanara District ;

(*b*) whether the said land has been distributed among the eligible farmers ;

(*c*) if not, the reasons for the same ?

SRI N. HUTCHAMASTHY GOWDA.—(Minister for Revenue)

(*a*) 29314-0-0

(*b*) 18113-0-0 acres of land is distributed

(*c*) the distribution of forest land is withheld as per Government Order.

ಶ್ರೀಮತಿ ರಾಧಾ ಭಟ್: ಜಮೀನನ್ನು ಆತುರವಾಗಿ ಹಂಚಿದ್ದಾರೆ. ಅನೇಕರಿಗೆ ಸಾಕಾದಷ್ಟು ಜಮೀನಿದ್ದರೂ ಅರಣ್ಯ ಇಲಾಖೆಯಿಂದ ಬಿಡುಗಡೆ ಮಾಡಿದ ಜಮೀನನ್ನು ಹಂಚಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್, ಹುಚ್ಚಮಾಸ್ತಿಗೌಡ : ಆತುರಾತುರವಾಗಿ ಹಂಚುವುದು ಕಷ್ಟ. ಇದಕ್ಕೆ ಕೆಲವು ಕ್ರಮ ಅನುಸರಿಸಬೇಕು. ಆದುದರಿಂದ ನಿಧಾನವಾಗಿಯೇ ಹಂಚಿದ್ದಾರೆಂಬ ಭಾವನೆಯಿದೆ. ಜಮೀನಿರುವವರಿಗೆ ಅರಣ್ಯದ ಜಮೀನನ್ನು ಹಂಚಿದ್ದರೆ ಅದನ್ನು ವಜಾ ಮಾಡಲು ಪ್ರಯತ್ನಮಾಡುತ್ತೇವೆ.